| Deposition Sheets (RP.No.57) Form No.4 |
|---|

**IN THE COURT OF II Addl. CIVIL JUDGE & J.M.F.C., KARKALA.**

**Criminal Case No. 573/2020**

ಪಿ.ಡಬ್ಲ್ಯು ಃ 1 ಸಿ.ಡಬ್ಲ್ಯು ಃ 3

ಸಾಕ್ಷಿದಾರನ ಹೆಸರು ಃ ಹರ್ಷನ್ ಕುಮಾರ್
ತಂದೆಯ ಹೆಸರು ಃ ಕೃಷ್ಣ
ಪ್ರಾಯ ಃ 24 ವರ್ಷ
ಉದ್ಯೋಗ ಃ ಬ್ಯಾಂಕ್ ಮ್ಯಾನೇಜರ್
ವಾಸ ಃ ಶಿರ್ಸಿ

ದಿನಾಂಕ 01.02.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಚಾಸಾ-1, 2 ಮತ್ತು 4 ರವರ ಪರಿಚಯ ಇದೆ. ಆರೋಪಿಗಳ ಪರಿಚಯ ಇದೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಅರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸುಮಾರು 2 ವರ್ಷದ ಹಿಂದೆ ನಾನು ಶಿವಪುರ ಗ್ರಾಮದ ನಿವಾಸಿಯಾದ ಶ್ರೀನಿವಾಸ್ ಹೆಬ್ಬಾರ್ ರವರ ಎಲೆಕ್ಟ್ರೀಶನ್ ಆಗಿ ಗುತ್ತಿಗೆ ಆಧಾರದಲ್ಲಿ ದಿನಗೂಲಿ ಕೆಲಸ ಮಾಡುತ್ತಿದ್ದೆ. ನನ್ನೊಂದಿಗೆ ಸುಮಾರು 9 ಜನ ಕೆಲಸ ಮಾಡುತ್ತಿದ್ದರು. ದಿಃ31.07.2019 ರಂದು ಕಬ್ಬಿನಾಲೆ ಗ್ರಾಮದ ಕಚ್ಚೂರು ಎಂಬಲ್ಲಿ ಶೇಖರ್ ಗೌಡ ಎನ್ನುವವರ ಮನೆಯ ಬಳಿ ಗಾಳಿ ಮಳೆಗೆ ಅಡಿಕೆ ಮರವು ಎಲೆಕ್ಟ್ರೀಕಲ್ ಕಂಬ ಮೇಲೆ ಬಿದ್ದ ಕಾರಣ ಒಂದು ಸಿಮೆಂಟನ ಎಲೆಕ್ಟ್ರಿಕ್ ಕಂಬ ಹಾಗೂ 2 ಮರದ ಎಲೆಕ್ಟ್ರೀಕ್ ಕಂಬ ತುಂಡಾಗಿದ್ದು ಅವುಗಳ ವೈಯರ್ ಗಳು ನೇತಾಡುತ್ತಿದ್ದು ಅದನ್ನು ದುರಸ್ಥಿ ಮಾಡುವ ಸಲುವಾಗಿ ಹೋಗಿರುತ್ತೇನೆ. ಅಲ್ಲಿ ಹೋಗುವಾಗ 1ನೇ ಆರೋಪಿ ಲೈನ್ ಮೆನ್ ರಾಜು ಸಿಕ್ಕಿದು ಅವರು ಅಲ್ಲಿಯ ಲೈನ್ ನ್ನು ವಿದ್ಯುತ್ ಸಂಪರ್ಕದಿಂದ ಕಡಿತಗೊಳಿಸಿದ್ದು ಲೈನ್ ಕೆಲಸ ಮಾಡಬಹುದು ಎಂದು ತಿಳಿಸಿರುತ್ತಾರೆ. ಆ ನಂತರ ನಾವು ಅಲ್ಲಿಗೆ ಹೋಗಿ ನೋಡಿದಾಗ

ಸಿಮೆಂಟ್ ಕಂಬ ಬುಡದಲ್ಲಿ ತುಂಡಾಗಿ ಅದರ ಬದಿಯಲ್ಲಿದ್ದ ಅಡಿಕೆ ಮರಕ್ಕೆ ವಾಲಿಕೊಂಡಿತ್ತು. ಕಂಬವು ಬುಡದಲ್ಲಿ ತುಂಡಾಗಿದ್ದರಿಂದ ಅದಕ್ಕೆ ಹತ್ತಲು ಆಗದ ಕಾರಣ ನಾನು ಚಾಸಾ-1, 2, 6, 4, 7 ಮತ್ತು ಮೃತ ಗುರುರಾಜ್ ಅದರ ವಯರ್ ಗಳನ್ನು ಹಿಡಿದು ಎಳೆದು ಕಂಬವನ್ನು ಬೀಳಿಸುತ್ತಿದ್ದು ಆಗ ನಾವು ಕೆಲಸ ಮಾಡುತ್ತಿದ್ದ ಜಾಗದಿಂದ ಸ್ವಲ್ಪ ದೂರದಲ್ಲಿ ಹೆಚ್ ಟಿ (ಹೈ ಟೆನ್ಷನ್ ವಯರ್ ) ಹಾದು ಹೋಗಿದ್ದು ಕಂಬವನ್ನು ಬೀಳಿಸುವ ಸಮಯದಲ್ಲಿ ಎಲ್ ಟಿ ವಯರ್ ಒಮ್ಮೆಲೆ ಹೆ ಟೆನ್ಷನ್ ವಯರ್ ಗೆ ತಾಗಿ ವಿದ್ಯುತ್ ಹರಿದು ನಮಗೆ ಶಾಕ್ ಹೊಡೆಯಿತು. ನಾವುಗಳು ನೆಲಕ್ಕೆ ಬಿದ್ದೇವು. ಇದರಿಂದ ಗುರುರಾಜ್ ರವರಿಗೆ ತೀವ್ರ ಸ್ವರೂಪದಲ್ಲಿ ಸುಟ್ಟ ಗಾಯವಾಯಿತು. ನನಗೆ ಹಾಗೂ ಚಾಸಾ-2 ರವರಿಗೆ ಗಾಯವಾಗಿರುತ್ತದೆ. ನಂತರ ನಮ್ಮನ್ನು ರಾಘವೇಂದ್ರ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ವೈದ್ಯರು ಪರೀಕ್ಷಿಸಿ ಗುರುರಾಜ್ ರವರು ಮೃತಪಟ್ಟಿರುತ್ತಾರೆ ಎಂದು ತಿಳಿಸಿ ನನಗೆ ಮತ್ತು ಚಾಸಾ-2 ರವರಿಗೆ ಚಿಕಿತ್ಸೆ ನೀಡಿರುತ್ತಾರೆ. ಚಿಕಿತ್ಸೆ ನೀಡಿದ ನಂತರ ನಮ್ಮನ್ನು ಬಿಡುಗಡೆಗೊಳಿಸಿರುತ್ತಾರೆ. ಘಟನೆಯ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಮಹಜರು ಸಮಯದಲ್ಲಿ ತೆಗೆದ 2 ಭಾವಚಿತ್ರಗಳನ್ನು ತೋರಿಸಿದ್ದು ನೋಡಿ ಗುರುತಿಸಿರುತ್ತಾರೆ. ಸದ್ರಿ ಭಾವಚಿತ್ರಗಳನ್ನು ಕ್ರಮವಾಗಿ ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು. ಶವಪಂಚನಾಮೆ ಮಹಜರು ಕಾಲದಲ್ಲಿ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಮೃತ ಗುರುರಾಜ್ ರವರ ಸುಟ್ಟು ಹೋದ ದೇಹದ ಭಾಗದ 4 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸದ್ರಿ ಭಾವಚಿತ್ರಗಳನ್ನು ನಿಪಿ-4 ರಿಂದ 7 ಎಂದು ಗುರುತಿಸಲಾಯಿತು. ಮೃತ ಗುರುರಾಜ್ ರವರು ನನ್ನ ಸಹೋದ್ಯೋಗಿ.

**ಪಾಟೀ ಸವಾಲು** ಃ ನ್ಯಾಯಾಲಯದ ಬೆಳಗ್ಗಿನ ಅವಧಿ ಮುಗಿದಿದ್ದು ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ

PW 1 to 4 completly turned hostile to the case of prosecution. Hence no purpose will be served by issuance of summons to CW 5 to 10. Hence by rejecting the prayer of learned APP evidence of CW 5 to 10 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for compliance Under 437A and Arguments.

Call on 26-09-2022.

II Addl. Civil Judge & JMFC.
Karkala (c/c)

Learned APP filed memo praying to issue s/s to the CW18 and 23. As the eye witness PW1 and 2 have completly turned hostile to the case of prosecution. Hence no purpose will be served by issuance of summons to CW18 and 23. Hence by rejecting the prayer of learned APP evidence of CW18 and 23 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed.

For compliance and Arguments.

Call on : 29-08-2022.

Prl. Civil Judge & JMFC.
Karkala

Learned APP filed memo, praying to issue s/s to the CW 14 to 16. As the Pw 1 and 2 have completly turned hostile to the case of prosecution and Hence no purpose will be served by issuance of summons to CW 14 to 16. Hence by rejecting the prayer of learned APP evidence of CW14 to 16 are

dropped and closed prosecution side evidence.

As there are no incriminating evidences against the accused recording of 313 statement is dispensed and posted for compliance Under 437A and Arguments.

Call on : 18.08.2022.

Prl. Civil Judge & JMFC.
Karkala